Sri ABDUL KHUDUS ANWAR.—Out of 20 houses constructed in Shimoga as given in the Statement, only 8 houses are allotted and the rest of 12 houses are vacant. When are you going to allot them?

Sri B. BASAVALINGAPPA.—The Housing Board will take suitable action and call for applications and allot them.

Sri ABDUL KHUDUS ANWAR:—Is it not a fact that 30 houses are constructed in Shimoga and the house are given only to one particular community? Are you going to withdraw the allotments and reallot the houses?

Sri B. BASAVALINGAPPA.—These particulars are not with me. Recently they have been allotted. But I have heard that all applications of other sections of the society are not adequately represented.

ಶ್ರೀ ಎಂ. ಎಚ್. ಜಯಪ್ರಕಾಶ ನಾರಾಯಣ್:—ಹೌಸಿಂಗ್ ಬೋರ್ಡ್ ಮೂಲಕ ಕಟ್ಟಿಸಿರುವ ಮನೆಗಳಲ್ಲಿ ನಿಯಮಾವಳಿಯ ಪ್ರಕಾರ ಪರಿಶಿಷ್ಟ ಜನಾಂಗ ಮತ್ತು ಪರಿಶಿಷ್ಟ ವರ್ಗಕ್ಕೆ ಎಷ್ಟು ಮನೆಗಳನ್ನು ಕೊಡಬೇಕೆಂದಿದೆಯೋ ಆ ಪ್ರಕಾರ ಹಂಚಿಕೆಯಾಗಿಲ್ಲ, ಅನ್ಯಾಯವಾಗಿದೆ. ಅವರಿಗೆ ಎಷ್ಟು ಪ್ರಮಾಣದಲ್ಲಿ ಕಡಿಮೆಯಾಗಿದೆ, ಅದನ್ನು ಮುಂದೆ ಕೊಡತಕ್ಕ ಕಾಲದಲ್ಲಿ ಸರಿಪಡಿಸಲಾಗುತ್ತದೆಯೇ?

ಶ್ರೀ ಬಿ. ಬಸವಲಿಂಗಪ್ಪ:—ಮಾನ್ಯ ಸದಸ್ಯರು ಕೇಳತಕ್ಕ ಎಲ್ಲ ವರ್ಗದವರಿಗೂ ಏನು ಮೀಸಲು ಇಡಬೇಕು, ಅದರ ಬಗ್ಗೆ ಮೊನ್ನೆ ತಾನೇ ಸರ್ಕಾರ ಆರ್ಡರ್ ಮಾಡಿದೆ. ಮೊದಲು ಯಾವ ರೀತಿ ಮಾಡಬೇಕೆಂದು ಇದ್ದಿಲ್ಲ. ನಿಯಮಗಳಲ್ಲಿ ಯಾವ ಸೂಚನೆಗಳೂ ಇದ್ದಿಲ್ಲವಾದುದರಿಂದ ಹಿಂದೆ ರಿಸರ್ವೇಷನ್ ಮಾಡಿ ಹಂಚಿಲ್ಲ. ಈಗ ನಿರ್ದೇಶನವನ್ನು ಕಳುಹಿಸಿದ್ದೇವೆ. ಅದರ ಪ್ರಕಾರ ಇನ್ನು ಮುಂದೆ ಅಲಾಟ್ ಮಾಡುತ್ತಾರೆ. ಹೌಸಿಂಗ್ ಬೋರ್ಡ್‌ನವರು ಕಟ್ಟತಕ್ಕ ಮನೆಗಳನ್ನು ಬೇರೆಯವರಿಗೆ ಅಲಾಟ್ ಮಾಡತಕ್ಕ ಕಾಲದಲ್ಲಿ ವಿಶಾಲ ಮನೋಭಾವನೆಯಿಂದ ಮಾನ್ಯ ಸದಸ್ಯರು ಹೇಳಿರತಕ್ಕ ಅಭಿಪ್ರಾಯವನ್ನು ಗಮನದಲ್ಲಿಟ್ಟುಕೊಂಡು ಅಲಾಟ್ ಮಾಡಲಾಗುತ್ತದೆ.

Sri ABDUL KHUDUS ANWAR.—There is a complaint that these houses are allotted only to those who have got their own houses and the claims of those who have no sites or houses are overlooked?

Sri B. BASAVALINGAPPA.—If the allegations are true, I will see that they are cancelled and re-allotted.

ASPHALTING OF MANDYA-TUMKUR ROAD

*723. Sri A. D. BILI GOWDA (Maddur).—

Will the Minister for Public Works and Electricity be pleased to state.—

Asterisks indicate that remarks or speeches have not been revised by the member concerned.

Whether Government would asphalt the road from Mandya to Tumkur *via* Keregodu, Koppa, Kowdlay, Yedavane, Amruthur and other en-route places ?

Sri H. M. CHANNABASAPPA (Minister for Public Works and Electricity) :—

No proposal at present. However, this will be examined depending on the availability of funds.

ಶ್ರೀ ಎ. ಡಿ. ಬಿಳಿಗೌಡ :—ಮಂಡ್ಯದಿಂದ ತುಮಕೂರಿಗೆ ಹೋಗತಕ್ಕ ಹೆದ್ದಾರಿಯಲ್ಲಿ ಕೌಡಲೇ ಬಳಿ ಒಂದು ಸೇತುವೆಯನ್ನು ಕಟ್ಟಲಾಗಿದೆ. ಅದರ ಆಚೆ ಮತ್ತು ಈಚೆ ಪಕ್ಕದಲ್ಲಿ ರಸ್ತೆ ಬಹಳ ನಾದುರಸ್ತಾಗಿ ಎತ್ತಿನ ಗಾಡಿಗಳು ಹೋಗಬೇಕಾದರೂ ಬಹಳ ಕಷ್ಟವಾಗುತ್ತಿದೆ. ಬೇಕಾದಷ್ಟು ಬಸ್ಸುಗಳು ಆ ರಸ್ತೆಯಲ್ಲಿ ಓಡಾಡುತ್ತವೆ. ಅದಷ್ಟು ಬೇಗ ಈ ರಸ್ತೆಯನ್ನು ರಿಪೇರಿ ಮಾಡಿಸಿ ಸುವ್ಯವಸ್ಥಿತವಾಗಿ ಮಾಡುತ್ತೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ:—ಕೌಡಲೇ ಸೇತುವೆಯ ಎರಡೂ ಕಡೆ ಅಪ್ರೋಚ್ ರೋಡ್ಸ್ ರಿಪೇರಿ ತಕ್ಷಣ ಮಾಡಿ ಕೊಡುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಎ.ಡಿ. ಬಿಳಿಗೌಡ :—ಈ ವರ್ಷದ ಬಡ್ಜೆಟ್ಟಿನಲ್ಲಿಯೇ ಸ್ವಲ್ಪ ಹಣವನ್ನು ಒದಗಿಸಿ ಜಾಗ್ರತೆಯಾಗಿ ಮಾಡಿಸಿಕೊಡುತ್ತೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ :—ಮಾನ್ಯ ಸದಸ್ಯರು ಹೇಳಿದ ಅಪ್ರೋಚ್ ಮಾಡಲು ಅಷ್ಟೇನೂ ಕಷ್ಟವಾಗುವುದಿಲ್ಲ. ಆಸ್ಫಾಲ್ಟಿಂಗ್ ಮಾಡಬೇಕೆಂದು ಕೇಳಿದರೆ ಬಹಳ ಕಷ್ಟವಾಗುತ್ತದೆ.

ಶ್ರೀ ಎಂ. ಎಚ್. ಜಯಪ್ರಕಾಶ ನಾರಾಯಣ್ :—ಈ ರಸ್ತೆಯಲ್ಲಿ ಸುಮಾರು 25 ಬಸ್ಸುಗಳು ಓಡಾಡುತ್ತವೆ. ರಸ್ತೆ ಹದಗೆಟ್ಟಿರುವುದರಿಂದ ಸಾರ್ವಜನಿಕರಿಗೆ ಬಹಳ ತೊಂದರೆಯಾಗಿದೆ. ಆದ್ದರಿಂದ ಇದಕ್ಕೆ ಆದ್ಯತೆಯನ್ನು ಕೊಟ್ಟು ಕೂಡಲೇ ರಿಪೇರಿ ಮಾಡಿಸುವುದಕ್ಕೆ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ :—ಹಣದ ಒತ್ತಡ ಬಹಳ ಹೆಚ್ಚಾಗಿದೆ. ಹಣ ಎಷ್ಟೆಷ್ಟು ಇದೆ ಎನ್ನುವುದನ್ನು ನೋಡಿಕೊಂಡು ಅದಕ್ಕೆ ತಕ್ಕಂತೆ ಆ ರಸ್ತೆಯ ಯೋಗ್ಯತೆ ಏನಿದೆ ಎನ್ನುವುದನ್ನು ನೋಡಿಕೊಂಡು ಸಾಧ್ಯವಾದಷ್ಟು ಕೂಡ ಸಹಾಯ ಮಾಡಲಿಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಎ. ಡಿ. ಬಿಳಿಗೌಡ :—ಕೌಡಲೇ ಬ್ರಿಜ್ ಕಡೆಯಿಂದ ಎಡಗಡೆ ಹೋಗುವಾಗ ಅಲ್ಲಿ ಅಕ್ವಿಜಿಷನ್ ಪ್ರೊಸೀಡಿಂಗ್ಸ್ ಪೂರ್ತಿಯಾಗದೆ ರಸ್ತೆಗೆ ಬಹಳ ಅಡಚಣೆಯಾಗುತ್ತಿದೆ. ಇದನ್ನಾದರೂ ಕೂಡ ತೀವ್ರವಾಗಿ ಪರಿಶೀಲನೆ ಮಾಡಿ ಜಾಗ್ರತೆ ಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಎಚ್.ಎಂ. ಚನ್ನಬಸಪ್ಪ :—ಅಡ್ಡಿ ಏನಿದೆ ಎನ್ನುವುದು ಮಾನ್ಯ ಸದಸ್ಯರಿಗೆ ಈಗ ಗೊತ್ತಾಗಿದೆ. ಅಕ್ವಿಜಿಷನ್ ಪ್ರೊಸೀಡಿಂಗ್ಸ್ ಆಗದೆ ಅಲ್ಲಿ ತೊಂದರೆಯಾಗಿರತಕ್ಕದ್ದು ಇರತಕ್ಕ ಅಡ್ಡಿ ಆಗಿದೆ. ಅದನ್ನು ನಿವಾರಣೆ ಮಾಡಿ ಆದಷ್ಟು ಬೇಗ ಪ್ರಯತ್ನಮಾಡಿ ಮುಗಿಸಿ, ಅಪ್ರೋಚಸ್ ಸರಿಪಡಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ.